ಕರ್ನಾಟಕ ಸರ್ಕಾರ

ಸಂ : ನಅಇ 599 ಮೈಅಪ್ರಾ 2012

ಕರ್ನಾಟಕ ಸರ್ಕಾರ ಸಚಿವಾಲಯ
ವಿಧಾನ ಸೌಧ, ಬೆಂಗಳೂರು,
ದಿನಾಂಕ :3-12-2012

ಸುತ್ತೋಲೆ

ವಿಷಯ: ಖಾಸಗಿ ವಿನ್ಯಾಸ ಅನುಮೋದನೆ ಅಭಿವೃದ್ಧಿಪಡಿಸುವಿಕೆ ಮತ್ತು ವಿನ್ಯಾಸಗಳಲ್ಲಿಯ ನಿವೇಶನಗಳನ್ನು ಬಿಡುಗಡೆಗೊಳಿಸುವ ಕುರಿತು ಅನುಸರಿಸಬೇಕಾದ ವಿಧಿ ವಿಧಾನಗಳು.

ಉಲ್ಲೇಖ: 1. ಸರ್ಕಾರದ ಸುತ್ತೋಲೆಯ ಕ್ರಸಂ: ನಅಇ/104(1)/ಬೆಂರೂಪ್ರಾ/2005 ದಿ:09-05-2005.
2. ಸರ್ಕಾರದ ಸುತ್ತೋಲೆಯ ಕ್ರ.ಸಂ: ನಅಇ/104(2)/ಬೆಂರೂಪ್ರಾ/2005 ದಿ:09-05-2005.
3. ಸರ್ಕಾರದ ಸುತ್ತೋಲೆಯ ಕ್ರಸಂ: ನಅಇ/104(3)/ಬೆಂರೂಪ್ರಾ/2005 ದಿ:09-05-2005.
4. ಸರ್ಕಾರದ ಸುತ್ತೋಲೆಯ ಕ್ರ.ಸಂ: ನಅಇ/104(4)/ಬೆಂರೂಪ್ರಾ/2005 ದಿ:09-05-2005.
5. ಸರ್ಕಾರದ ಅಧಿಸೂಚನೆಯ ಕ್ರ.ಸಂ:ಆರ್‌ಡಿ/174/ಮುನಮು/2005 ದಿ:23-04-2005.
6. ಸರ್ಕಾರದ ಸುತ್ತೋಲೆಯ ಕ್ರ.ಸಂ: ನಅಇ/112/ಬೆಂರೂಪ್ರಾ/2005 ದಿ:26-05-2005.

*****

ಸರ್ಕಾರದ ಉಲ್ಲೇಖಿತ 1 ರಿಂದ 4 ರ ಸುತ್ತೋಲೆಗಳಲ್ಲಿ ಖಾಸಗಿ ವಿನ್ಯಾಸಗಳ ಅನುಮೋದನೆ, ಅಭಿವೃದ್ಧಿಪಡಿಸುವಿಕೆ ಮತ್ತು ಅನುಮೋದಿತ ವಿನ್ಯಾಸಗಳಲ್ಲಿನ ನಿವೇಶನಗಳನ್ನು ಬಿಡುಗಡೆ ಮಾಡುವ ಕುರಿತು ವಿಧಾನವನ್ನು ವಿವರಿಸಲಾಗಿದೆ. ಸರ್ಕಾರ ಉಲ್ಲೇಖಿತ (5)ರ ಅಧಿಸೂಚನೆಯನ್ನು ಹೊರಡಿಸಿ ರಾಜ್ಯದಲ್ಲಿ ನಿವೇಶನಗಳನ್ನು ನೋಂದಣಿ ಮಾಡಲು ಅನುಸರಿಸಬೇಕಾದ ಕ್ರಮ ಮತ್ತು ನೋಂದಣಿ ಸಮಯದಲ್ಲಿ ನೋಂದಣಿ ಅಧಿಕಾರಿಗಳು ಪಡೆಯಬೇಕಾದ ದಾಖಲೆಗಳ ಕುರಿತು ಸಹ ನಿರ್ದೇಶನ ನೀಡಲಾಗಿದೆ. ಇದೇ ಸುತ್ತೋಲೆಯಲ್ಲಿ ವಿನ್ಯಾಸ ಅನುಮೋದನೆಯಾದ ನಂತರ ನಿವೇಶನ ಬಿಡುಗಡೆಯ ಕುರಿತು ಸ್ಥಳೀಯ ಯೋಜನಾ ಪ್ರಾಧಿಕಾರಗಳಿಂದ ದಾಖಲೆಗಳನ್ನು ಪಡೆದು ನಿವೇಶನಗಳನ್ನು ನೋಂದಾಯಿಸುವ ಬಗ್ಗೆ ಸೂಚನೆ ನೀಡಲಾಗಿದೆ. ಸರ್ಕಾರದ ಉಲ್ಲೇಖಿತ (1) ರಿಂದ (4)ರ ಸುತ್ತೋಲೆಗಳ ನಿರ್ದೇಶನಗಳನ್ನು ಪುನರುಚ್ಚರಿಸುತ್ತಾ, ನಿವೇಶನಗಳನ್ನು ಬಿಡುಗಡೆಗೊಳಿಸುವ ಪ್ರಯುಕ್ತ ಉಲ್ಲೇಖ (6)ರಲ್ಲಿ ಹೊರಡಿಸಲಾಗಿದ್ದ ಸರ್ಕಾರದ ಸುತ್ತೋಲೆಯಲ್ಲಿ ಕೆಲವು ಮಾರ್ಪಾಡುಗಳನ್ನು ಸೂಚಿಸಿ ಅದರನ್ವಯ ಈ ಕೆಳಕಂಡ ಮಾರ್ಗಸೂಚಿಯನ್ನು ಅನುಸರಿಸಲು ನಗರಾಭಿವೃದ್ಧಿ ಪ್ರಾಧಿಕಾರಗಳು, ನಗರ ಯೋಜನಾ ಪ್ರಾಧಿಕಾರಗಳು ಮತ್ತು ರಾಜ್ಯದಲ್ಲಿಯ ಎಲ್ಲಾ ಸ್ಥಳೀಯ ಸಂಸ್ಥೆಗಳಿಗೆ ನಿರ್ದೇಶನ ನೀಡಲಾಗಿದೆ.

1. ವಿನ್ಯಾಸದಲ್ಲಿನ ನಿವೇಶನಗಳನ್ನು ಬಿಡುಗಡೆ ಮಾಡುವಾಗ ವಿನ್ಯಾಸದ ಬೇರೆ ಬೇರೆ ಭಾಗಗಳಲ್ಲಿ ಇರುವ ನಿವೇಶನಗಳನ್ನೊಳಗೊಂಡು ಚದುರಿದಂತೆ ಶೇಕಡಾ 40 ರಷ್ಟು ನಿವೇಶನಗಳನ್ನು

2/-

ಕಲ್ ಯೋಜನಾ ಪ್ರಾಧಿಕಾರ
ಸಂಖ್ಯೆ 2454
ದಿನಾಂಕ 24/12/12
ಸ. ಶಾ.
ಖ.ವಿ.
ಪ.ವಿ.
ಟ

ಪ್ರಾರಂಭಿಕ ಹಂತದಲ್ಲಿ ಬಿಡುಗಡೆ ಮಾಡತಕ್ಕದ್ದು. ಈ ರೀತಿ ಬಿಡುಗಡೆ ಮಾಡುವಾಗ ಅರ್ಜಿದಾರರು ವಿನ್ಯಾಸವನ್ನು ಎರಡು (2) ವರ್ಷಗಳೊಳಗಾಗಿ ಅಥವಾ ನಗರಾಭಿವೃದ್ಧಿ ಪ್ರಾಧಿಕಾರಗಳು:ನಗರ ಯೋಜನಾ ಪ್ರಾಧಿಕಾರಗಳು:ಸ್ಥಳೀಯ ಸಂಸ್ಥೆಯು ನಿಗದಿಪಡಿಸುವ ಅವಧಿಯೊಳಗಾಗಿ (ಅವಧಿ ೨ ವರ್ಷಕ್ಕೆ ಮೀರಕೂಡದು) ಅಭಿವೃದ್ಧಿಪಡಿಸತಕ್ಕದ್ದು ಎಂಬ ನಿಬಂಧನೆ ವಿಧಿಸತಕ್ಕದ್ದು.

2. ಉಳಿದ ಶೇಕಡಾ ೬೦ ರಷ್ಟು ನಿವೇಶನಗಳ ಪೈಕಿ 2ನೇ ಹಂತದಲ್ಲಿ ಶೇಕಡಾ ೩೦ ರಷ್ಟು ನಿವೇಶನಗಳನ್ನು ವಿನ್ಯಾಸದಲ್ಲಿನ ಎಲ್ಲಾ ಸಿವಿಲ್ ಕಾಮಗಾರಿಗಳು ಅಂದರೆ (ರಸ್ತೆ, C.D.Works ಹಾಗೂ ಚರಂಡಿಕೆಲಸಗಳು) ಪೂರ್ಣಗೊಳಿಸಿ ಉದ್ಯಾನವನ/ಬಯಲು ಜಾಗ ಮತ್ತು ನಾಗರೀಕ ಸೌಲಭ್ಯದ ನಿವೇಶನಗಳನ್ನು ನಗರಾಭಿವೃದ್ಧಿ ಪ್ರಾಧಿಕಾರ : ಸ್ಥಳೀಯ ಸಂಸ್ಥೆಗೆ ಪುಕ್ಕಟೆಯಾಗಿ ನೋಂದಾಯಿಸಿ ಹಸ್ತಾಂತರಿಸಿಕೊಟ್ಟ ನಂತರ ಬಿಡುಗಡೆ ಮಾಡತಕ್ಕದ್ದು.

೩. ಮೇಲ್ಕಂಡ ಎರಡು ಹಂತಗಳಲ್ಲಿ ನಿವೇಶನಗಳನ್ನು ಬಿಡುಗಡೆಗೊಳಿಸಿದ ನಂತರ ಅಂತಿಮವಾಗಿ ಉಳಿಯುವ ಶೇಕಡಾ ೩೦ ರಷ್ಟು ನಿವೇಶನಗಳನ್ನು ವಿನ್ಯಾಸದಲ್ಲಿ ಅಗತ್ಯ ಮೂಲ ಸೌಕರ್ಯಗಳಾದ ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ ಹಾಗೂ ರಸ್ತೆಗಳ ಡಾಂಬರೀಕರಣ ಸೇರಿದಂತೆ ಸಂಪೂರ್ಣವಾಗಿ ಅಭಿವೃದ್ಧಿಪಡಿಸಿ ಮತ್ತು ಅಭಿವೃದ್ಧಿಪಡಿಸಿದ ಎಲ್ಲಾ ಮೂಲಭೂತ ಸೌಲಭ್ಯ ಸೇರಿದಂತೆ ರಸ್ತೆಗಳನ್ನು ನಗರಾಭಿವೃದ್ಧಿ ಪ್ರಾಧಿಕಾರ : ಸ್ಥಳೀಯ ಸಂಸ್ಥೆಗೆ ಪುಕ್ಕಟೆಯಾಗಿ ಅರ್ಜಿದಾರರಿಂದ ನೋಂದಾಯಿಸಿಕೊಂಡ ನಂತರವೇ ಬಿಡುಗಡೆ ಮಾಡತಕ್ಕದ್ದು.

4. ಕ್ರಮ ಸಂಖ್ಯೆ (1) ರಲ್ಲಿ ನಿಗದಿಪಡಿಸಿದ ಅವಧಿಯೊಳಗೆ ವಿನ್ಯಾಸದ ಅಭಿವೃದ್ಧಿ ಕಾಮಗಾರಿಗಳನ್ನು ವಿನ್ಯಾಸದ ಮಾಲೀಕರು ಪೂರ್ಣಗೊಳಿಸದೇ ಇದ್ದಲ್ಲಿ, ಉಳಿದ ಅಭಿವೃದ್ಧಿ ಕಾಮಗಾರಿಗಳನ್ನು ನಗರಾಭಿವೃದ್ಧಿ ಪ್ರಾಧಿಕಾರ:ನಗರ ಯೋಜನಾ ಪ್ರಾಧಿಕಾರ:ಸ್ಥಳೀಯ ಸಂಸ್ಥೆಯೇ ಕೈಗೊಳ್ಳತಕ್ಕದ್ದು. ಇದಕ್ಕೆ ತಗಲುವ ವೆಚ್ಚವನ್ನು ಉಳಿದ ಶೇ ೬೦ ರಷ್ಟು ನಿವೇಶನಗಳನ್ನು ಮಾರಾಟ ಮಾಡುವದರಿಂದ ಬರುವ ಹಣದಿಂದ ಭರಿಸತಕ್ಕದ್ದು. ಇದಕ್ಕೆ ಅನುವಾಗಲು ವಿನ್ಯಾಸದ ಮಾಲೀಕರು ಮೇಲಿನ ಷರತ್ತನ್ನು ಅನುಸರಿಸದೇ ಇದ್ದಲ್ಲಿ. ಉಳಿದ ಶೇಕಡ ೦೦ ರಷ್ಟು ನಿವೇಶಗಳನ್ನು ನಗರಾಭಿವೃದ್ಧಿ ಪ್ರಾಧಿಕಾರ:ನಗರ ಯೋಜನಾ ಪ್ರಾಧಿಕಾರ :ಸ್ಥಳೀಯ ಸಂಸ್ಥೆಗೆ ಪುಕ್ಕಟೆಯಾಗಿ ಹಸ್ತಾಂತರಿಸುವ ಕುರಿತು ಮುಚ್ಚಳಿಕೆ ಪತ್ರ ಬರೆಸಿ ಕೊಳ್ಳತಕ್ಕದ್ದು. ನಗರಾಭಿವೃದ್ಧಿ ಪ್ರಾಧಿಕಾರ:ನಗರ ಯೋಜನಾ ಪ್ರಾಧಿಕಾರ:ಸ್ಥಳೀಯ ಸಂಸ್ಥೆಯು ಈ ರೀತಿಯಾಗಿ ವಿನ್ಯಾನ ಅಭಿವೃದ್ಧಿಪಡಿಸಿದ ನಂತರ ಯಾವುದಾದರೂ ಮೊತ್ತವು ಹೆಚ್ಚುವರಿಯಾಗಿ ಉಳದರೆ ಅದನ್ನು ವಿನ್ಯಾಸದ ಮಾಲೀಕರಿಗೆ ಹಿಂತಿರುಗಿಸತಕ್ಕದ್ದು.

೫. ಉಪ ವಿಭಜನೆಗಳಲ್ಲದ ವಸತಿ ಮತ್ತು ವಸತಿಯೇತರ ಏಕ ನಿವೇಶನಗಳಿಗೆ ಅನುಮೋದನೆ ನೀಡುವಾಗ ವಿನ್ಯಾನ ಅನುಮೋದನೆ ನೀಡುವ ಸಮಯದಲ್ಲಿ ವಿಧಿಸಲಾದ ಷರತ್ತುಗಳನ್ನು ಪೂರೈಸಿದ ನಂತರವೇ ನಿವೇಶನಗಳನ್ನು ಬಿಡುಗಡೆ ಮಾಡತಕ್ಕದ್ದು.

3/-

6. ವಿನ್ಯಾಸಗಳಲ್ಲಿಯ ನಿವೇಶನಗಳನ್ನು ಬಿಡುಗಡೆ ಮಾಡುವಾಗ ಬಿಡುಗಡೆಯ ಪ್ರಮಾಣ ಪತ್ರದಲ್ಲಿ ನಿವೇಶನಗಳ ಸಂಖ್ಯೆ ಮತ್ತು ನಂಬರುಗಳನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು ಹಾಗೂ ಸುತ್ತೋಲೆಗೆ ಲಗತ್ತಿಸಿದ ನಮೂನೆ 1 ಮತ್ತು 2ರಲ್ಲಿ ಸಂಧರ್ಬಕ್ಕನುಗುಣವಾಗಿ ನಿವೇಶನಗಳ ಬಿಡುಗಡೆಯ ಪ್ರಮಾಣ ಪತ್ರ ನೀಡತಕ್ಕದ್ದು.

(ಟಿ.ಎಂ.ವಾಸುದೇವರಾವ್)
ಸರ್ಕಾರದ ಅಧೀನ ಕಾರ್ಯದರ್ಶಿಗಳು
ನಗರಾಭಿವೃದ್ಧಿ ಇಲಾಖೆ

ಪ್ರತಿಗಳನ್ನು ಮಾಹಿತಿಗಾಗಿ :

ಸಂ:ನಗ್ರಾಯೋ:ಜಂ.ನಿ:23:2012

ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಕಛೇರಿ,
ಬಹುಮಹಡಿಗಳ ಕಟ್ಟಡ, 4ನೇ ಹಂತ,
ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 18 DEC 2012

ಯಥಾ ಪ್ರತಿಯನ್ನು ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

1. ನಗರ ಮತ್ತು ಗ್ರಾಮಾಂತರ ಯೋಜನಾ ಹಚ್ಚುವರಿ ನಿರ್ದೇಶಕರು, ವಲಯ ಕಛೇರಿ, ಧಾರವಾಡ ಇವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.
2. ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ವಿಭಾಗೀಯ ಕಛೇರಿ, ಬೆಂಗಳೂರು, ಮೈಸೂರು ಮತ್ತು ಗುಲ್ಬರ್ಗಾ ಇವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.
3. ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳ ಆಯುಕ್ತರಿಗೆ.
4. ಎಲ್ಲಾ ಯೋಜನಾ ಪ್ರಾಧಿಕಾರಗಳ ಸದಸ್ಯ ಕಾರ್ಯದರ್ಶಿಗಳು.
5. ಮುಖ್ಯಾಧಿಕಾರಿಗಳು, ಎಲ್ಲಾ ನಗರಸಭೆ/ ಪುರಸಭೆ.
6. ಇಲಾಖೆಯ ಎಲ್ಲಾ ಶಾಖಾ ಕಛೇರಿಗಳಿಗೆ ಮಾಹಿತಿಗಾಗಿ.
7. ಕೇಂದ್ರ ಕಛೇರಿಯ ಅಧಿಕಾರಿ ಹಾಗೂ ತಾಂತ್ರಿಕ ಸಿಬ್ಬಂದಿಯವರಿಗೆ ಮಾಹಿತಿಗಾಗಿ ನೀಡಲಾಗಿದೆ.
8. ಕಛೇರಿ ಪ್ರತಿ.

ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಪರವಾಗಿ

ಗೆ,

ಪ್ರಮಾಣ ಪತ್ರ – 2

ಕ್ರ.ಸಂ.---------- ----------ನಗರ ಯೋಜನಾ ಪ್ರಾಧಿಕಾರ/
ನಗರಾಭಿವೃದ್ಧಿ ಪ್ರಾಧಿಕಾರ/ನಗರಸಭೆ/ಪುರಸಭೆ

---------- ಜಿಲ್ಲೆ ---------- ತಾಲ್ಲೂಕು
---------- ಹೋಬಳಿ ---------- ಗ್ರಾಮದ ರಿ.ಸ.ನಂ.ಬ್ಲಾಕ್ ಸಂ.----------ಕ್ಕೆ---------- ನಗರಾಭಿವೃದ್ಧಿ ಪ್ರಾಧಿಕಾರ/ನಗರ ಯೋಜನಾ ಪ್ರಾಧಿಕಾರ/ಸ್ಥಳೀಯ ಸಂಸ್ಥೆಯಿಂದ ವಿನ್ಯಾಸಕ್ಕೆ ಅನುಮೋದನೆ ನೀಡಿ ಪತ್ರದ ಕ್ರ.ಸಂ.----------
ದಿನಾಂಕ:---------- ರನ್ವಯ ಬಿಡುಗಡೆ ಮಾಡಲಾಗಿದೆ. ಈ ವಿನ್ಯಾಸದಲ್ಲಿ ಒಟ್ಟು --------- ನಿವೇಶನಗಳಿವೆ.

ದಿನಾಂಕ:----------ರ ಪ್ರಮಾಣ ಪತ್ರದಲ್ಲಿ ---------- ನಿವೇಶನಗಳನ್ನು ಬಿಡುಗಡೆಗೊಳಿಸಲಾಗಿದೆ. ಈಗ ಅರ್ಜಿದಾರರು ಮನವಿಯನ್ನು ಸಲ್ಲಿಸಿ ವಿನ್ಯಾಸದಲ್ಲಿನ ಸಿವಿಲ್ ಕಾಮಗಾರಿಗಳನ್ನು ಪೂರ್ಣವಾಗಿ ಮುಗಿಸಿರುವುದಾಗಿ ತಿಳಿಸಿರುವುದನ್ನು ಪರಿಶೀಲಿಸಿ ಈ ಕೆಳಗಿನ ನಿವೇಶನಗಳನ್ನು ಈ ಮೂಲಕ ಬಿಡುಗಡೆ ಮಾಡಲಾಗಿದೆಯೆಂದು ಪ್ರಮಾಣೀಕರಿಸಲಾಗಿದೆ.
ಕ್ರಮ ಸಂಖ್ಯೆ:----------

ಆಯುಕ್ತರು
---------- ನಗರಾಭಿವೃದ್ಧಿ ಪ್ರಾಧಿಕಾರ
ಸದಸ್ಯ ಕಾರ್ಯದರ್ಶಿ
---------- ನಗರ ಯೋಜನಾ ಪ್ರಾಧಿಕಾರ/
ಮುಖ್ಯಾಧಿಕಾರಿಗಳು ----------ಪುರ/ನಗರಸಭೆ/
ಕಾರ್ಯದರ್ಶಿ ---------- ಗ್ರಾಮ ಪಂಚಾಯಿತಿ

ಗೆ,

ಪ್ರಮಾಣ ಪತ್ರ – 1

ಕ್ರ.ಸಂ.---------- ----------ನಗರ ಯೋಜನಾ ಪ್ರಾಧಿಕಾರ/
ನಗರಾಭಿವೃದ್ಧಿ ಪ್ರಾಧಿಕಾರ/ನಗರಸಭೆ/ಪುರಸಭೆ

---------- ಜಿಲ್ಲೆ ---------- ತಾಲ್ಲೂಕು
----------, ಹೋಬಳಿ ---------- ಗ್ರಾಮದ
ಿ.ಸ.ನಂ.ಬ್ಲಾಕ್ ಸಂ.----------ಕ್ಕೆ ----------ನಗರಾಭಿವೃದ್ಧಿ
ಪ್ರಾಧಿಕಾರ/ನಗರ ಯೋಜನಾ ಪ್ರಾಧಿಕಾರ/ಸ್ಥಳೀಯ ಸಂಸ್ಥೆಯಿಂದ ವಿನ್ಯಾಸಕ್ಕೆ ಅನುಮೋದನೆ
ನೀಡಿ ಪತ್ರದ ಕ್ರ.ಸಂ.----------
ದಿನಾಂಕ:---------- ರನ್ವಯ ಬಿಡುಗಡೆ ಮಾಡಲಾಗಿದೆ. ಈ
ವಿನ್ಯಾಸದಲ್ಲಿ ಒಟ್ಟು ---------- ನಿವೇಶನಗಳಿವೆ.

ಸರ್ಕಾರದ ದಿನಾಂಕ:---------- ಸುತ್ತೋಲೆಯ ಕ್ರಮ ಸಂಖ್ಯೆ.----
----------ರನ್ವಯ ವಿನ್ಯಾಸ ಬಿಡುಗಡೆ ಮಾಡುವ ಸಂದರ್ಭದಲ್ಲಿ ಮೇಲೆ
ನಮೂದಿಸಲಾದ ವಿನ್ಯಾಸದಲ್ಲಿ ಈ ಕೆಳಗಿನ ನಿವೇಶನಗಳನ್ನು ಬಿಡುಗಡೆ ಮಾಡಿರುವುದಾಗಿ
ಪ್ರಮಾಣೀಕರಿಸಿದೆ.

ಕ್ರಮ ಸಂಖ್ಯೆ:----------

ಆಯುಕ್ತರು

---------- ನಗರಾಭಿವೃದ್ಧಿ ಪ್ರಾಧಿಕಾರ
ಸದಸ್ಯ ಕಾರ್ಯದರ್ಶಿ

---------- ನಗರ ಯೋಜನಾ ಪ್ರಾಧಿಕಾರ/
ಮುಖ್ಯಾಧಿಕಾರಿಗಳು ---------- ಪುರ/ನಗರಸಭೆ/
ಕಾರ್ಯದರ್ಶಿ ---------- ಗ್ರಾಮ ಪಂಚಾಯಿತಿ